OS No.62/2018 DW.1

ಅಸಲು ದಾವೆ ಸಂಖ್ಯೆ - 62/2018
ಡಿ.ಡಬ್ಲ್ಯೂ - 01
ದಿನಾಂಕಃ 03-07-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಎಸ್ ಎಮ್ ವಕೀಲರಿಂದ**

ನಿಮ್ಮ ಮಗಳಿಗೆ ಬಿಟ್ಟು ಕೊಡಲಾದ ಆಸ್ತಿಯ ಮೇಲೆ ನಿಮಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ನನ್ನ ಮತ್ತು ನನ್ನ ಅಣ್ಣನ ನುಡವೆ ವಾಟ್ನಿ ಯಾಗಿದ್ದು ಅದರಲ್ಲಿ ನನ್ನ ಅಣ್ಣನಿಗೆ ಮನೆ, ಹಿತ್ತಲ, ಬಂಗಾರ ಮತ್ತು ಹಣವನ್ನು ಕೊಟ್ಟಿದ್ದೇವೆ. ನನಗೆ ಹೊಲವನ್ನು ಕೊಟ್ಟಿದ್ದರು. ಸದರಿ ಹೊಲವನ್ನು ಮಾರಾಟ ಮಾಡಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಮ್ಮ ಅಣ್ಣನಿಗೆ ಮನೆ, ಬಂಗಾರ ಮತ್ತು ಹಣ ಬಂದಿದೆ ಎಂದು ನಿಮ್ಮ ತಕರಾರಿನಲ್ಲಿ ಏನಾದರೂ ಬರೆದ್ದೀದಿರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮಗಳಿಗೆ ಭಕ್ಷಿಸ ಮುಖಾಂತರ ನೀವು ನೀಡಿದ ಆಸ್ತಿಯ ಮೇಲೆ ನಿಮ್ಮ ಅಣ್ಣ ಉಪ ವಿಭಾಗಾಧಿಕಾರಿಗಳ ಮುಂದೆ ಸದರಿ ಭಕ್ಷಿಸ ಪತ್ರವನ್ನು ಪ್ರಶ್ನೀಸಿದ್ದರು ಎಂದರೆ ಸರಿ. ಸದರಿ ಮೇಲ್ಮಮನವಿಯನ್ನು ಪ್ರಶ್ನಿಸಿ ನೀವೆನಾದರೂ ಬೇರೆ ಮೇಲ್ಮಮನವಿಯನ್ನು ಸಲ್ಲಿಸಿದ್ದೀರಾ ಎಂದರೆ ಪ್ರಶ್ನಿಸಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ನಾನೇ ಹೇಳಿ ಬರೆಸಿದ್ದೇನೆ.

ನಿಮ್ಮ ಮತ್ತು ಅಣ್ಣತಮ್ಮಂದಿರ ನಡುವೆ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಆಗಿದೆ ಎಂದು ನುಡಿಯುತ್ತಾರೆ. ಯಾವುದೇ ಹಿಸ್ಸೆ ಆಗದೇ ಇದ್ದರೂ ಕೂಡ ನಿಮ್ಮ ಅಣ್ಣನಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.

Plaintiff is present. DW1 is present. Sri. CSM advocate fully cross examined DW1.

Sri. VBT advocate prays time for further defendant side evidence.

Call on 07-08-2025

CJ and JMFC, Savanur